21 AUG 2008

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 72 ಎಂಆರ್‌ಆರ್ 08

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 04.08.2008

## ಸುತ್ತೋಲೆ

ವಿಷಯ: ಭೂಮಿ ಬಳಕೆದಾರರ ಶುಲ್ಕದಲ್ಲಿ ವೆಚ್ಚ ಮಾಡಲು ವಿತ್ತೀಯ ಅಧಿಕಾರ ಪತ್ಯಾಯೋಜನೆ ಕುರಿತು.

ಉಲ್ಲೇಖ: (1) ಸ.ಆದೇಶ ಸಂ ಆರ್‌ಡಿ 28 ಎಂಆರ್‌ಆರ್ 2002 ದಿ:6.8.2002
(2) ಸ.ಆದೇಶ ಸಂ ಆರ್‌ಡಿ 28 ಎಂಆರ್‌ಆರ್ 2002 ದಿ:7.8.2002

ಉಲ್ಲೇಖ ಒಂದರ ಸರ್ಕಾರಿ ಆದೇಶದಲ್ಲಿ ಬಳಕೆ ಶುಲ್ಕಗಳನ್ನು ಪಿ.ಡಿ.ಖಾತೆಗಳಲ್ಲಿ ಉಳಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮುತಿ ನಿಡಲಾಗಿದೆ. ಲ್ಲೇಖ ಎರಡರ ಸರ್ಕಾರಿ ಆದೇಶದಲ್ಲಿ ವೆಚ್ಚ ಮಾಡಬಹುದಾದ ಬಾಬ್ತುಗಳನ್ನು ಹಾಗೂ ವೆಚ್ಚದ ಪ್ರಮಾಣ ನಿರ್ಧರಿಸಲು ಒಂದು ಸಮಿತಿಯನ್ನು ರಚಿಸಲಾಗಿದೆ.

ಕಾಲಕಾಲಕ್ಕೆ ಭೂಮಿ ಬಳಕೆದಾರರ ಸಮಿತಿಯು ಸಭೆ ಸೇರಿ, ಭೂಮಿ ಬಳಕೆದಾರರ ಶುಲ್ಕದಿಂದ ಭರಿಸಬಹುದಾದಂತ ಅರ್ಹ ಬಾಬ್ತುಗಳನ್ನು ನಿರ್ಧರಿಸಿರುತ್ತದೆ. ಅದರಂತೆ, ಸರ್ಕಾರವು ಭೂಮಿ ಬಳಕೆದಾರರ ಸಮಿತಿಯು ಅನುಮೋದಿಸಿದಂತಹ ಅರ್ಹ ಬಾಬ್ತುಗಳ ಪಟ್ಟಿಯ ವಿವರಗಳನ್ನು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

ಭೂಮಿ ಬಳಕೆದಾರರ ಶುಲ್ಕ ಸಮಿತಿಯು ಅನುಮೋದಿಸಿದ ಭೂಮಿ ಬಳಕೆದಾರರ ಶುಲ್ಕದಿಂದ ಭರಿಸಬಹುದಾದಂತಹ ಅರ್ಹ ಬಾಬ್ತುಗಳ ಪಟ್ಟಿಯನ್ನು ಕ್ರೋಡೀಕರಿಸಿ ಸದ್ಯದಲ್ಲಿಯೇ ಪ್ರತ್ಯೇಕ ಮಾರ್ಗಸೂಚಿಯನ್ನು ಹೊರಡಿಸಲಾಗುವುದು.

ಭೂಮಿ ಬಳಕೆದಾರರ ಸಮಿತಿಯು ದಿ: 07.07.2008 ರಂದು ಸಭೆ ಸೇರಿ, ಜಿಲ್ಲಾಧಿಕಾರಿಗಳು ಮತ್ತು ತಹಶಿಲ್ದಾರರುಗಳಿಗೆ ಭೂಮಿ ಬಳಕೆದಾರರ ಶುಲ್ಕದಲ್ಲಿ ವೆಚ್ಚ ಮಾಡಲು ವಿತ್ತೀಯ ಅಧಿಕಾರ ಪತ್ಯಾಯೋಜನೆ ನೀಡಲು ತೀರ್ಮಾನಿಸಿದೆ. ವಿತ್ತೀಯ ಅಧಿಕಾರ ಪತ್ಯಾಯೋಜನೆಯ ವಿವರ ಈ ಕೆಳಕಂಡಂತೆ ಇರುತ್ತದೆ.

⇒ ಜಿಲ್ಲಾಧಿಕಾರಿಗಳು ಪ್ರತಿ ವರ್ಷ ರೂ.1,00,000/- ಗಳ ವೆಚ್ಚವನ್ನು ಭರಿಸಬಹುದು. ಈ ವೆಚ್ಚವು ಭೂಮಿ ಬಳಕೆದಾರರ ಸಮಿತಿಯು ನಿರ್ಧರಿಸಿರುವಂತಹ ಅರ್ಹ ಬಾಬ್ತುಗಳ ಪಟ್ಟಿಯಲ್ಲಿ ಇಲ್ಲದಿರುವಂತಹ ಬಾಬ್ತುಗಳಾಗಿರಬೇಕು ಅದರೆ ಭೂಮಿ ಯೋಜನೆಗೆ ಸಂಬಂಧಿಸಿರಬೇಕು. ಜಿಲ್ಲಾಧಿಕಾರಿಗಳು ಈ ವೆಚ್ಚ ಮಾಡಿದ ನಂತರ ಸದರಿ ಬಾಬ್ತನ್ನು ಅರ್ಹ ಬಾಬ್ತುಗಳ ಪಟ್ಟಿಯಲ್ಲಿ ಸೇರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು ಮತ್ತು ಈ ವೆಚ್ಚದ ವಿವರಗಳನ್ನು ಸುತ್ತೋಲೆ ಸಂಖ್ಯೆ: ಆರ್‌ಡಿ 1 ಎಂಆರ್‌ಆರ್ 2003 ದಿ: 7.04.2003ರಲ್ಲಿ ಸೂಚಿಸಿರುವಂತೆ ಪಿ.ಡಿ.ಖಾತೆ ನಮೂನೆಯಲ್ಲಿ ಒದಗಿಸಬೇಕು. ಈ ಅಧಿಕಾರದಲ್ಲಿ ಹೊಸ ವಸ್ತುಗಳನ್ನು ಖರಿದಿಸಲು ಅವಕಾಶವಿರುವುದಿಲ್ಲಾ.

3

ಜಿಲ್ಲಾಧಿಕಾರಿಗಳ ಪರವಾಗಿ
ಹಾಸನ ಜಿಲ್ಲೆ, ಹಾಸನ

⇒ ಎಲ್ಲಾ ತಹಶಿಲ್ದಾರರುಗಳಿಗೆ ಭೂಮಿ ಯೋಜನೆಗೆ ಸಂಬಂಧಿಸಿದ ಅವರ್ತಕ ವೆಚ್ಚಗಳನ್ನು ಭರಿಸಲು (ಜನರೇಟರ್‌ಗೆ ಅನಿಲ ಸೇರಿದಂತೆ ಅರ್ಹ ಬಾಬ್ತುಗಳಿಗೆ ಮಾತ್ರ) ರೂ.10,000/-ಗಳ imprest ಮೊತ್ತವನ್ನು ನೀಡಿದೆ.

ಈ ಸುತೋಲೆಯು ಕಂದಾಯ ಇಲಾಖೆಯ ಇಂಟರ್ ನೆಟ್ ಸೈಟ್ http;//www.revdept.kar.nic.in ನಲ್ಲಿ ಲಭ್ಯವಿರುತ್ತದೆ.

(ಡಿ.ತಂಗರಾಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ

ಇವರಿಗೆ
ಎಲ್ಲಾ ಪ್ರಾದೇಶಿಕ ಆಯುಕ್ತರುಗಳು
ಎಲ್ಲಾ ಜಿಲ್ಲಾಧಿಕಾರಿಗಳು
ಎಲ್ಲಾ ತಹಶಿಲ್ದಾರುಗಳು